ಶ್ರೀ ಜಿ. ಬಿ. ಶಂಕರ ರಾವ್.—ತಮ್ಮಿಂಥ ರಾಜಕೀಯ ಮುಖಂಡರುಗಳಂ ಬಂದು ಈ ಬಗ್ಗೆ ಪ್ರಭಾವ ಬೀರುತ್ತಿದ್ದಾರೆ. ಅದಕ್ಕಾಗಿಯೇ ಇನ್ನೂ ಅಂತಿಮ ತೀರ್ಮಾನ ಕೈಕೊಳ್ಳುವುದಕ್ಕೆ ಆಗಿಲ್ಲ.

ಶ್ರೀ ಎಚ್. ಶಿವಪ್ಪ.—ಹಾಗಿದ್ದರೆ ತಾವು ಪ್ರಭಾವಕ್ಕೆ ಒಳಗಾಗುತ್ತೀರಾ ? ಮುತ್ತು ಪೆಟ್ಟಿನ ಪ್ರಭಾವ ಬಂದರೆ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಒಪ್ಪುತ್ತೀರಾ ? Will the Government go against the recommendations of the Committee set up by the Government of India ?

ಶ್ರೀ ಜಿ. ಬಿ. ಶಂಕರ ರಾವ್.—ಮೊದಲು ನಿಮ್ಮ ಒಂದು ಪ್ರಭಾವ ಕಡಿಮೆ ಆಗಲಿ ; ಅನಂತರ ನೋಡೋಣ.

SRI C. M. ARUMUGHAM.—May I know the number of applicants seeking permission to start Engineering Colleges for this year ?

SRI G. B. SHANKAR RAO —We have received 9 applications seeking permission to start Engineering Colleges.

Productfon Centre to make Stone idols at Shivarapatna Malur Taluk.

687. SRI P.N. REDDY (Malur).— Will the Minister for Labour, Small Scale Industries, and Wakfs be pleased to state :—

(a) whether there is any proposal to start a production centre to make stone idols at Shivarapatna, Malur Taluk, on the pattern of the production centres working at Bidar for Bidri ware, Channapatna for Lacquer-ware and Sagar for Sandalwood ;

(b) whether Government is aware that there is concentration of Artisans specialised in stone sculptors in Shivarapatna village and the Artisans of Shivarapatna are known for their excellent craftsmanship and are known not only in India but in other parts of the world also;

(c) if so, what are the programmes taken by the Government to improve their skills and their economic conditions?

SRI C. M. IBRAHIM (Minister for Labour, Small Scale Industries and Wakfs).—

(a) No, Sir.

(b) Yes, Sir.

(c) A co operative Society has been organised namely "Shilpakala Sahakara Sangha Ltd" at Shivarapatna for their benefit. During the current year, a training programme has been proposed for 10 Artisans.

The setting up of a Rural Marketing and Service Centre has also been approved by the All India Handicrafts Board

ಶ್ರೀ ಪಿ. ಎನ್. ರೆಡ್ಡಿ.— ಶಿವಾರಪಟ್ಟಣದಲ್ಲಿ ಇಡೀ ಪ್ರಪಂಚದಲ್ಲಿಯೇ ವಿಖ್ಯಾತಿ ಪಡೆದಂಥ ಶಿಲ್ಪಗಳಿರುವುದು ಸರ್ಕಾರದ ಗಮನಕ್ಕೂ ಬಂದಿದೆ ಮತ್ತು ಸರ್ವರಿಗೂ ತಿಳಿದಿದೆ. ಮತ್ತು ಇಲ್ಲಿ ಕೆತ್ತನೆ ಮಾಡಿದಂಥ ವಿಗ್ರಹಗಳನ್ನು ಪ್ರಪಂಚದ ಎಲ್ಲ ರಾಷ್ಟ್ರಗಳವರೂ ಬಂದು ಕೊಂಡುಕೊಂಡು ಹೋಗುತ್ತಿದ್ದಾರೆ. ಈಗಲೂ ಸಹ ಅಲ್ಲಿ ವಿಗ್ರಹಗಳನ್ನು ಕೊಂಡುಕೊಳ್ಳಲು ಮುಂದೆ ಬರುತ್ತಿದ್ದಾರೆ. ಆದ್ದರಿಂದ ಅಲ್ಲಿ ಒಂದು ಉತ್ಪಾದನಾ ಕೇಂದ್ರವೊಂದನ್ನು ಏತಕ್ಕೆ ತೆರೆಯಬಾರದು?

ಶ್ರೀ ಸಿ. ಎಂ. ಇಬ್ರಾಹಿಂ.—ಈಗಾಗಲೇ ಗ್ರಾಮಾಂತರ ಮಾರುಕಟ್ಟೆ ಹಾಗೂ ಸೇವಾಕೇಂದ್ರವನ್ನು ಸ್ಥಾಪಿಸಲು ಅಖಿಲಭಾರತ ಕುಶಲಕಲಾ ಮಂಡಲಿಯವರಿಂದ ಅನುಮತಿ ದೊರೆತಿದೆ. ಇದರ ಜೊತೆಗೆ ನಮ್ಮ ಕರ್ನಾಟಕ ಕುಶಲಕಲಾ ಮಂಡಲಿಯವರು ಸಹ ಒಂದು ಸೆಂಟರನ್ನು ಅಲ್ಲಿ ಪ್ರಾರಂಭ ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದಾರೆ. ಆದಕಾರಣ ಮಾನ್ಯ ಸದಸ್ಯರು ಕೊಟ್ಟಂತಹ ಸಲಹೆಗಳು ಈ ಮೂಲಕ ಪೂರೈಸುವುದರಿಂದ ಉತ್ಪಾದನಾ ಕೇಂದ್ರದ ಅಗತ್ಯವಿಲ್ಲವೆಂದು ತಿಳಿದುಕೊಂಡಿದ್ದೇವೆ. ಈಗಾಗಲೇ ಅಲ್ಲಿನವರು ಒಂದು ಸೊಸೈಟಿ ಮಾಡಿಕೊಂಡಿದ್ದಾರೆ. ಅದಕ್ಕೆ ಸರ್ಕಾರದಿಂದ ೨೫ ಸಾವಿರ ರೂಪಾಯಿಗಳನ್ನು ಕೊಟ್ಟಿದೆ. ಈ ಕೆಲಸಗಳಿಂದ ಅವರಿಗೆ ಸಾಕಷ್ಟು ಅನುಕೂಲವಾಗಿಲ್ಲವೆಂದು ಮುಂದೆ ಸರ್ಕಾರಕ್ಕೆ ತಿಳಿದುಬಂದರೆ, ತಾವು ಹೇಳಿದಂಥ ಸಲಹೆಯನ್ನು ಪರಿಶೀಲನೆ ಮಾಡೋಣ.

ಶ್ರೀ ಪಿ. ಎನ್. ರೆಡ್ಡಿ.— ಸಂಘದ ಪ್ರಶ್ನೆ ಒಂದು ಕಡೆ ಇರಲಿ. ಗ್ರಾಮಾಂತರ ಮಾರುಕಟ್ಟೆ ಹಾಗೂ ಸೇವಾ ಕೇಂದ್ರವನ್ನು ಇನ್ನು ಎಷ್ಟು ದಿವಸದಲ್ಲಿ ಸ್ಥಾಪಿಸುತ್ತೀರಿ?

ಶ್ರೀ ಸಿ. ಎಂ. ಇಬ್ರಾಹಿಂ.— ಆದಷ್ಟು ಜಾಗ್ರತೆ ಸ್ಥಾಪಿಸಬೇಕೆಂಬ ಕಳಕಳಿಯನ್ನಿಟ್ಟುಕೊಂಡು ಕಳೆದ ಹದಿನೈದು ದಿವಸಗಳ ಹಿಂದೆ ಶಿಲ್ಪಿಗಳ ಮತ್ತು ಕರಕುಶಲಗಾರರ ಸಮ್ಮೇಳನವೊಂದನ್ನು ಕರೆದಿದ್ದೆವು. ಆದರಲ್ಲಿ ಸಮಗ್ರವಾಗಿ ಚರ್ಚೆ ಮಾಡಲಾಗಿದೆ ಮತ್ತು ಇದರ ಬಗ್ಗೆ ಒಂದು ಮಾಸ್ಟರ್ ಪ್ಲಾನ್‌ನನ್ನು ತಯಾರು ಮಾಡಲಾಗಿದೆ. ಸಮ್ಮೇಳನದಲ್ಲಿ ಇದನ್ನು ಆದಷ್ಟು ಬೇಗ ಸ್ಥಾಪಿಸಬೇಕೆಂದು ನಿರ್ಣಯ ಕೂಡ ಮಾಡಲಾಗಿದೆ. ಇದನ್ನು ಆದಷ್ಟು ಜಾಗ್ರತೆ ಮಾಡಲಾಗುತ್ತದೆ.

ಶ್ರೀ ಪಿ.ಎನ್. ರೆಡ್ಡಿ.— (೩) ಪ್ರಶ್ನೆಗೆ ಉತ್ತರವಾಗಿ ಈ ವರ್ಷದಲ್ಲಿ ಹತ್ತು ಜನರಿಗೆ ಶಿಲ್ಪಿಗಳ ತರಬೇತಿ ಕೊಡುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದು ತಿಳಿಸಿದ್ದೀರಿ. ಪ್ರಪಂಚದ ಅತ್ಯಂತ ವಿಖ್ಯಾತ ಶಿಲ್ಪಿಗಳೆಂದು ಹೆಸರು ಪಡೆದಿರುವ ಇವರಿಗೆ ಇಲಾಖೆ ವತಿಯಿಂದ ಯಾವ ರೀತಿಯ ತರಬೇತಿ ಕೊಡುತ್ತೀರಿ?

ಶ್ರೀ ಸಿ.ಎಂ. ಇಬ್ರಾಹಿಂ.ಇತ್ತೀಚೆಗೆ ಹೊಸ ಹೊಸ ವಿನ್ಯಾಸಗಳಿಗೆ ಬೇಡಿಕೆಗಳು ಬರುತ್ತಿವೆ. ಅಲ್ಲದೆ, ಒಬ್ಬ ಶಿಲ್ಪಿಯು ಪ್ರತಿಯೊಂದು ವಿನ್ಯಾಸದಲ್ಲಿಯೂ ಪ್ರವೀಣನಾಗಿರುವುದಿಲ್ಲ. ಒಬ್ಬೊಬ್ಬ ಶಿಲ್ಪಿಯು ಒಂದೊಂದು ವಿನ್ಯಾಸ ಅಥವಾ ಕಲೆಯಲ್ಲಿ ಪ್ರವೀಣರಾಗಿರುತ್ತಾರೆ. ಇಲ್ಲಿ ಅವರಿಗೆ ತಿಳಿಯದೆ ಇರತಕ್ಕ ಕಲೆ ಬಗ್ಗೆ ತರಬೇತಿ ಕೊಡಲಾಗುತ್ತದೆ. ಕಲೆಯ ಬಗ್ಗೆ ಹೆಚ್ಚಿನ ಮಾಹಿತಿ ಗೊತ್ತಾಗಲಿ ಎನ್ನುವುದೇ ಇದರ ಉದ್ದೇಶ.

Minor Irrigation Tanks in Lingasugur, Kustagi Taluks

198. SRI M. GANGANNA (Kushtagi).— Will the Minister for Transport and Minor Irrigation be pleased to state:—

(a) the number of minor Irrigation tanks surveyed in Lingasugur and Kustagi Taluks of Raichur District (The list of villages where tank surveys have been completed be furnished).

(b) the number of tanks, the surveys of which are being taken up in the current year (the list of villages where the tanks are likely to be located may be laid on the table of the House)?

SRI M. M. J. SADYOJATHA (Minister for Transport and Minor Irrigation).—

(a) 10. The list of villages is appended (Statement 1)*

(b) The list of villages is appended (Statement 2)*

Copies placed in the Karnataka Legislative Library.